ಕವಿತೆ




## ಸಂಗೀತ ರವಿರಾಜ್

ಕಲೆ: ರೂಪಶ್ರೀ ಕಲ್ಲಿಗನೂರು




# ವಾಸ್ತವದ ಹುತ್ತದೊಳಗೆ

ಹೇಗಿದ್ದರೂ ನಮ್ಮ ಸೂರಿಗೆರಡು
ಕೆಮ್ಮಣ್ಣಿನ ಹಾದಿಗಳು...
ತೋಟದೊಳಗಿನ ಮಟ್ಟಾದ
ಗುಂಡಿ ಗುಡುಪು ಇಲ್ಲದ ದಾರಿ ಒಂದಾದರೆ
ಇಕ್ಕಟ್ಟಾದ ಎತ್ತರ ತಗ್ಗಿನ ಹಾದಿ ಇನ್ನೊಂದು
ಎಳೆಯ ವಾಸ್ತುತಜ್ಞನ ನುಡಿಯಂತೆ
ಎರಡನೇ ಮಾರ್ಗ ವಾಸ್ತುವಿಗೆ ಸರಿಯಂತೆ!

ವಿಧಿಯಿಲ್ಲದೆ ವಾಸ್ತು ಹಾದಿಯ ಹೊಂಡ
ಗುಂಡಿಯಲ್ಲಿ ಗಾಡಿ ಓಡಿಸಿ
ಜೀಪಿಗೆ ಆಗಾಗ ಕೆಟ್ಟು ಹೋಗುವುದೇ ಕೆಲಸ
ವಾಸ್ತುವಿಗೆ ಎದುರಾಡುವುದುಂಟೆ?!
ಈ ದಿಗ್ಬಂಧನ ಮೀರಿ ಆ ಒಳ್ಳೆ ರಸ್ತೇಲಿ
ಹೋಗೋಣವೆಂದರೆ..

ಗಂಡನ ಮಾಜಿ ಪ್ರೇಯಸಿಯ ಮನೆ
ವಾಸ್ತು ಸರಿಯಿರುವ ಕೆಟ್ಟ ರಸ್ತೆಯಲಿ !
ಈ ನೆಪಕ್ಕೆ ಆ ನೆಪವ ಸೇರಿಸಿ
ಮನಸ್ಸು ಪ್ರಕ್ಷುಬ್ಧ
ಮತ್ತೆ ವಾಗ್ವಾದ
ನಮಗೆ ನಾವೇ ವಿಧಿಸಿ ಕೊಂಡ
ದೋಷಗಳಿಗೆ
ಪರಿಹಾರ ಕೊಡುವವರಾರು?

ಬೆಳ್ಳಂಬೆಳಗ್ಗೆ ದಿಕ್ಕು ಹೇಳುತ್ತಿದ್ದ
ಚಿಕ್ಕ ಪ್ರಾಯದ ದೊಡ್ಡ ವಾಸ್ತುತಜ್ಞ
ಮೊನ್ನೆ ಸಂಜೆ ತಾನೇ
ಕೊಲೆಯಾದನಂತೆ!
ವರದಿ ಬಂದಾಗ ಬೆಚ್ಚಿ ಬಿದ್ದು
ಎಲ್ಲ ದೋಷಗಳಿಗೆ ಪರಿಹಾರ
ಕಂಡುಕೊಳ್ಳುವೆನೆಂದು ಸೆಟೆದು
ನಿಂತಿರುವೆ...

ವಾಸ್ತು ಅವಾಸ್ತುಗಳ ನಡುವೆ
ಅವಾಸ್ತವಿಕ ಮರಣ ಮೃದಂಗವೊಂದು
ಕೆಮ್ಮಣ್ಣಿನ ಹಾದಿಯಲ್ಲಿ ಧೂಳೆಬ್ಬಿಸಿದೆ...